ಕಟ್ಟಡದೇ ಹೋದರೆ ಕೂಡಲೇ ನೀರು ಕನೆಕ್ಷನ್ ತೆಗೆಯುತ್ತೀರಿ. ಹೀಗಿರುವಾಗ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಂದ ಮತ್ತು ಇನ್ನಿತರ ಏಂಜನ್ಸಿಯರ್ ಕನ್ಸರ್ನ್‌ಗಳಿಂದ ಬರುವ ಅರಿಯರ್ಸ್ ವಸೂಲು ಮಾಡಲು ಏನು ತೀವ್ರವಾದ ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಇವರೆಲ್ಲರಿಗೂ ಡಿಸ್‌ಕನೆಕ್ಷನ್ ನೋಟೀಸುಗಳನ್ನು ಕಳುಹಿಸಿದ್ದೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳುವ ಹಾಗೆ ಸ್ಟೇಟು ಗವರ್ನ್‌ಮೆಂಟು ಕಡೆಯಿಂದ ಹಾಗೂ ಕೇಂದ್ರ ಸರಕಾರದವರ ಕಡೆಯಿಂದ ಅರಿಯರ್ಸ್ ಇವೆ. ಇವರಿಗೂ ಕೂಡ ಬಾಕಿ ಕೊಡಬೇ ಇದ್ದರೆ ಡಿಸ್‌ಕನೆಕ್ಷನ್ ಮಾಡುತ್ತೇವೆಂದು ನೋಟೀಸುಗಳನ್ನು ಕಳುಹಿಸಲಾಗಿದೆ. ಇದರಲ್ಲಿ ಕಾರ್ಪೊರೇಷನ್ ಕಡೆಯಿಂದ ಅರಿಯರ್ಸ್ ಕೂಡ ಬರಬೇಕಾಗಿದೆ. ಆದರೆ ಕಾರ್ಪೊರೇಷನ್ ಕಡೆಯ ಪಬ್ಲಿಕ್ ಟ್ಯಾಪ್ ನಿಲ್ಲಿಸಿದರೆ ಜನರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಸದಸ್ಯರೇ ಬಂದು ಹೇಳುತ್ತಾರೆ. ಹಾಗೆ ಇನ್ಸ್‌ಟಿಗಳಿಗೆ ಮತ್ತು ಇನ್ನಿತರ ಇನ್ಸ್‌ಟಿಟ್ಯೂಷನ್‌ಗಳಿಗೆ ಡಿಸ್‌ಕನೆಕ್ಷನ್ ಮಾಡಬೇಕು ಎಂದು ಮಾಡಿದರೆ ಮಾನ್ಯ ಸದಸ್ಯರಂತಹವರೇ ಬಂದು ನೀರು ನಿಲ್ಲಿಸಬೇಡಿ ಎಂದು ಸರ್ಕಾರಕ್ಕೆ ಒತ್ತಾಯ ತರುತ್ತಾರೆ, ಆದರೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಇರಾಖೆಗಳಿಗೆ ಬಾಕಿ ಕೊಟ್ಟಿಲ್ಲ ಎಂದು ಡಿಸ್‌ಕನೆಕ್ಷನ್ ನೋಟೀಸುಗಳನ್ನು ಕಳುಹಿಸಿಕೊಡಲಾಗಿದೆ ಮತ್ತು ಒತ್ತಾಯ ಕೂಡ ಮಾಡುತ್ತಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಮಾನ್ಯ ಮಂತ್ರಿಗಳು ಇಲ್ಲಿ ಒಂದು ಆಶ್ವಾಸನೆ ಕೊಡಬೇಕು. ಮಂತ್ರಿಗಳ ಮನೆಯವರು ನೀರಿನ ಬಾಕಿ ಕೊಡದೇ ಇದ್ದರೆ ಮಂತ್ರಿಗಳ ಮನೆಗೂ ನೀರು ನಿಲ್ಲಿಸುತ್ತೀರೇನು ?

ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಮಂತ್ರಿಗಳ ಮನೆ ಅಥವಾ ಬೇರೆಯವರ ಮನೆ ಎಂದೇನಿಲ್ಲ. ಯಾವ ನೀರಿನ ಚಾರ್ಜು ಕೊಡದೇ ಬಾಕಿ ಇಟ್ಟುಕೊಂಡಿರುತ್ತಾರೋ ಅಂತಹ ಎಲ್ಲರ ಮನೆಗಳಿಗೂ ಡಿಸ್‌ಕನೆಕ್ಷನ್ ಮಾಡುತ್ತಾರೆ. ಇದರಲ್ಲಿ ಯಾವ ಭೇದಭಾವ ಮಾಡಲಾಗುವುದಿಲ್ಲ.

Construction of Road in Kudremukh Area

79. Sri B. BHASKARA SHETTY (Kaup).—

Will the Minister for Industries, Information and Publicity be pleased to state :—

(*a*) when the exploitation work of the ore deposited in Kudremukh area of the State could be started ;

(*b*) the steps taken by the Government for construction of straight road to Mangalore port from the mining area ;

(*c*) the estimated cost of the said road work and from where the said amount would be provided ;

(*d*) when the construction work of this road would be started and the areas through which the said road passes ?

Sri A. P. APPANNA (Deputy Minister for Industries).—

(*a*) This has not yet been finally decided.

(SRI A. P. APPANNA)

(b) Special staff has been sanctioned by the Government to prepare the plans and estimates for the construction of this staight road. This estimated cost is being ferwarded to Government of India for their sanction.

(c) (i) The estimated cost of two ore carrying roads is about Rs. 166.47 lakhs.

(ii) the estimated cost of one ore carrying road is about Rs. 116-67 lakhs.

The Government of India has been asked to bear the expenditure to be incurred on these roads.

(d) The work relating to this road will be started after sanction is accorded to the estimated cost. This road from Kudremukh to Mangalore passes *via* Malleshwar, Gangamulla, Mullarghat, Bajagoli, Karkala and Panoubidri.

ಶ್ರೀ ಬಿ. ಭಾಸ್ಕರಶೆಟ್ಟಿ.—ಕುದುರೆಮುಖದ ಯೋಜನೆಗಾಗಿ ಅಂದಾಜು ಮಾಡಿರುವ ಒಟ್ಟು ವೆಚ್ಚ ಎಷ್ಟು ? ಇದನ್ನು ಯಾವಾಗ ಆರಂಭ ಮಾಡಬೇಕೆಂದು ಇದ್ದೀರಿ ?

†ಶ್ರೀ ಎ.ಪಿ. ಅಪ್ಪಣ್ಣ.—ಕುದುರೆಮುಖದ ಯೋಜನೆ ಕೇಂದ್ರ ಸರ್ಕಾರದವರು ಎಕ್.ಎಂ.ಡಿ.ಸಿ ಮೂಲಕ ತೆಗೆದುಕೊಳ್ಳಲಿಕಾದ ಯೋಜನೆ. ಇದಕ್ಕೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರುಮಾಡಿ ಇದಕ್ಕಾಗಿ ಎರಡು ರೋಡುಗಳು ಆಗಬೇಕಾಗಿದೆ ಇದಕ್ಕೆ ಹಣವನ್ನು ಗ್ಯಾರಂಟಿಯಾಗಿ ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಲಾಗಿದೆ. ಕೇಂದ್ರದವರಿಂದ ಇನ್ನೂ ಅನುಮತಿ ದೊರಕಿಲ್ಲ. ಕೇಂದ್ರ ಸರಕಾರಕ್ಕೆ ಈ ರೋಡುಗಳನ್ನು ಮಾಡುವ ವೆಚ್ಚವನ್ನು ಗ್ಯಾರಂಟಿಯಾಗಿ ಕೊಡಬೇಕೆಂದೂ ಕೇಳಿಕೊಳ್ಳಲಾಗಿದೆ. ಇದರ ಬಗ್ಗೆ ಅವರಿಗೆ ಬರೆಯಲಾಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—(ಸಿ)ಗೆ ಉತ್ತರವಾಗಿ ಎರಡು ರೋಡ್ ಗಳು ಎಂದು ಹೇಳಿದ್ದೀರಿ. ಇದೇನು ಡಬ್ಬಲ್ ರೋಡುಗಳೆಂದು ಮಾಡುತ್ತೀರಾ ಹೇಗೆ ? ಇದರಲ್ಲಿ ಖರ್ಚು ಕೂಡ ಒಂದಕ್ಕೊಂದು ವ್ಯತ್ಯಾಸವಾಗಿದೆ.

ಶ್ರೀ ಎ. ಪಿ. ಅಪ್ಪಣ್ಣ.—ಇದರಲ್ಲಿ ಎರಡು ತರಹ ರೋಡುಗಳು ಬರುತ್ತವೆ. ಇದರಲ್ಲಿ ಒಂದು ರೋಡು 22 ಅಡಿ ಅಗಲದು ಬರುತ್ತದೆ ಇನ್ನೊಂದು ಲೈನಿನಲ್ಲಿ ರೋಡು ಮಾಡುವಾಗ 12 ಅಡಿಯಿರುತ್ತದೆ. ಇದರಲ್ಲಿ ಒಂದಕ್ಕೆ 166.47 ಲಕ್ಷ ಆಗುತ್ತೆ. ಇನ್ನೊಂದು ರಸ್ತೆಗೆ 113.67 ಲ ಬರುತ್ತದೆ.

ಶ್ರೀ ಕೆ. ಚಿದಾನಂದ.—ಹಿಂದೆ ಈ ರೋಡುಗಳಾಗಬೇಕೆಂದು ದಿವಂಗತ ಬಾಳಿಗಾರವರು ಬಹು ಪ್ರಯತ್ನ ಮಾಡಿದರು. ಆಗ ಇಂತಹ ರೋಡನ್ನು ಮಾಡುವಾಗ ಬೆಳ್ಳಿಗಡ ಬಂಟವಾಳದ ಮೇರೆ ಹೋಗುವ ಹಾಗೆ ಒಂದು ರೋಡು ಮಾಡಬೇಕೆಂದು ಇತ್ತು. ಈಗ ಇದನ್ನು ಬದಲಾವಣೆ ಮಾಡಲು ಕಾರಣವೇನು ?

ಶ್ರೀ ಎ. ಪಿ. ಅಪ್ಪಣ್ಣ.—ಇಲ್ಲಿ ರೋಡುಗಳನ್ನು ಮಾಡುವುದು ಕುದುರೆಮುಖದ ಯೋಜನೆಗೆ ಅನುಕೂಲವಾಗುವಂತೆ ಮಾತ್ರವಾಗಿ ಅದಷ್ಟು ಷಾರ್ಟೆಸ್ಟ್ ರೂಟು ತೋರಿಸಿದರೆ ಕೇಂದ್ರದವರು ನಮಗೆ ಒಪ್ಪಿಗೆ ಕೊಟ್ಟು ಅವರಿಂದ ಮಂಜೂರಾತಿ ಪಡೆಯಲು ಸಾಧ್ಯವಾಗುತ್ತದೆ. ಇದರಲ್ಲಿ ಪೂರ್ತಿ ಹಣವನ್ನು ಅವರ ಕಡೆಯಿಂದ ಪಡೆಯುವಾಗ ಬೇರೆ ಮಾರ್ಗದಲ್ಲಿ. ರೋಡುಮಾಡುವ ಗಾಗಿಲ್ಲ.